ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ಇವರ ನ್ಯಾಯಾಲಯ

ಸಂ/ಕಂ/ನಾಕಮ/ತಕರಾರು/17/2015-16 ದಿನಾಂಕ 13-10-2016

## ಹಿಂಬರಹ

ವಿಷಯ:- ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಗರಗ ಗ್ರಾಮದ ಸ.ನಂ. 342 ವಿಸ್ತೀರ್ಣ 3.00 ಎಕರೆ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ತಕರಾರರು ಅರ್ಜಿ ಸಲ್ಲಿಸಿದ ಬಗ್ಗೆ.

ಉಲ್ಲೇಖ:- 1] ಶ್ರೀ ಎಂ.ಹೂಲೆಪ್ಪ ತಂದೆ ದಿ॥ಹರವಿನ ರಾಮಪ್ಪ, ಇವರ ಹಕ್ಕು ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ದಿನಾಂಕ 18-06-2014.

2] ಶ್ರೀ ಶಿವನಂದಪ್ಪ ತಂದೆ ಮಾರೆಪ್ಪ, ಗರಗ ಗ್ರಾಮ ಇವರು ಹಕ್ಕುಬದಲಾವಣೆ ಮಾಡಬಾರದೆಂದು ತಕರರು ಸಲ್ಲಿಸಿದ ದಿನಾಂಕ 15-07-2014

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಮನವಿಗಳಲ್ಲಿ ಕೋರಿರುವ ಮೇರೆಗೆ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಗರಗ ಗ್ರಾಮದ ಸ.ನಂ. 342 ವಿಸ್ತೀರ್ಣ 3.00 ಎಕರೆ ಜಮೀನಿನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಸದರಿ ಜಮೀನನ್ನು ಸದರಿಯವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿರುತ್ತೀರಿ.

ಸದರಿ ಜಮೀನಿನ ಕುರಿತು ವಿಚಾರಣೆ ನಡೆಸಲಾಗಿ ವಿಚಾರಣೆ ಸಮಯದಲ್ಲಿ ದಾಖಲೆಗಳನ್ನು ಸಲ್ಲಿಸಿದ್ದು, ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಈಗಾಗಲೇ ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಹೊಸಪೇಟೆ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ ಓ.ಎಸ್. ನಂ.184/2012ರಲ್ಲಿ ಪ್ರಕರಣ ದಾಖಲಾಗಿದ್ದು ದಿನಾಂಕ 01-12-2015 ರಂದು ಮಾನ್ಯ ನ್ಯಾಯಾಲಯವು ಪ್ರತಿವಾದಿಯ ದಾವೆಯ ವಿರುದ್ಧ ಶಾಶ್ವತ ಪ್ರತಿಭಾಂಧಕಾಜ್ಞೆಯನ್ನು ಘೋಷಿಸಿರುವುದು ಕಂಡುಬಂದಿರುತ್ತದೆ.

ತದನಂತರ ಪ್ರತಿವಾದಿಯು ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಹೊಸಪೇಟೆ ನ್ಯಾಯಾಲಯದಲ್ಲಿ ದಿನಾಂಕ 01-12-2015 ರಂದು ಘೋಷಿಸಿರು ಶಾಶ್ವತ ಪ್ರತಿಭಾಂಧಕಾಜ್ಞೆಯ ವಿರುದ್ಧ ಮಾನ್ಯ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಹೊಸಪೇಟೆ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆಓ.ಎಸ್. ನಂ.109/2015 ರ ಪ್ರಕಾರ ಮೊಕದ್ದಮೆ ಹೂಡಿದ್ದು ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿರುವುದು ಕಂಡು ಬಂದಿರುತ್ತವೆ.

ಕಾರಣ ಸದರಿ ಪ್ರಕರಣವು ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಹೊಸಪೇಟೆ ನ್ಯಾಯಾಲಯದಲ್ಲಿ ಪ್ರಕಣ ಸಂಖ್ಯೆ ಓ.ಎಸ್. ನಂ.184/2012ರಲ್ಲಿ ದಾಖಲಾಗಿ ವಿಚಾರಣಾ ಹಂತದಲ್ಲಿರುವುದು ಕಂಡುಬಂದಿರುವುದಿಂದ ಸದರಿ ಪ್ರಕರಣವನ್ನು ವಿಲೇಗೊಳಿಸಲಾಗಿದೆ.

ಉಪತಹಶೀಲ್ದಾರರು,
ನಾಡಕಛೇರಿ, ಮರಿಯಮ್ಮನಹಳ್ಳಿ

ಗೆ,

1] ಶ್ರೀ ಎಂ.ಹೂಲೆಪ್ಪ ತಂದೆ ದಿ॥ಹರವಿನ ರಾಮಪ್ಪ, ಗರಗ ಗ್ರಾಮ
2] ಶ್ರೀ ಶಿವನಂದಪ್ಪ ತಂದೆ ಮಾರೆಪ್ಪ, ಗರಗ ಗ್ರಾಮ

ಪ್ರತಿಯನ್ನು ಭೂಮಿ ಶಾಖೆ, ಹೊಸಪೇಟೆ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

① H. Manjunatha 14/10/2016.

② ಶಿವನ-ದಪ್ಪ